**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ರವರು ನಿಯಮ 72 ರಡಿಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ.**

**ಪ್ರಶ್ನೆ:- ಸರ್ಕಾರವು ಭಿಕ್ಷಾಟನೆ ತಡೆಯಲು ಪ್ರತೀ ವರ್ಷ ಕೋಟ್ಯಂತರ ರೂ. ವ್ಯಯಿಸುತ್ತಿದ್ದರೂ, ಕರ್ನಾಟಕದಲ್ಲಿ ಭಿಕ್ಷಾಟನೆ ಬೃಹತ್ ದಂಧೆಯಾಗಿ ಮಾರ್ಪಟ್ಟಿದೆ. ಈ ದಂಧೆಯ ಸೂತ್ರದಾರರು ಅಪ್ರಾಪ್ತ ಯುವತಿಯರು ಹಾಗೂ ಮಹಿಳಾ ಭಿಕ್ಷುಕರನ್ನು ವೇಶ್ಯಾವಾಟಿಕೆ ಜಾಲಕ್ಕೆ ದೂಡುತ್ತಿರುವ ಆರೋಪ ಕೇಳಿ ಬಂದಿದ್ದು, ಆತಂಕಕ್ಕೀಡು ಮಾಡಿದೆ. ಭಿಕ್ಷುಕ ಮಹಿಳೆಯರು ಯುವತಿಯರನ್ನು ವೇಶ್ಯಾವಾಟಿಕೆಗೆ ಬಳಸುತ್ತಿರುವ ತಂಡವು ಹೆಚ್ಚಾಗಿ ಬಾಡಿಗೆ ಮನೆಗಳು, ಹೋಟೆಲ್ ರೂಂಗಳಲ್ಲಿ ಈ ದಂಧೆ ನಡೆಸುತ್ತಾರೆ.**

**ಕಳೆದ 3 ವರ್ಷಗಳಲ್ಲಿ ಕಾಣೆಯಾದ ಸಾವಿರಕ್ಕೂ ಹೆಚ್ಚಿನ ಮಕ್ಕಳು ಇನ್ನೂ ಪತ್ತೆಯಾಗಿಲ್ಲ. ಈ ಕಾಣೆಯಾದ ಮಕ್ಕಳನ್ನು ಕಳ್ಳ ಸಾಗಾಣಿಕೆ ಮಾಡಿರುವ ಅನುಮಾನವಿದೆ. ಕಾಣೆಯಾದ ಮಕ್ಕಳನ್ನು ಪತ್ತೆ ಹಚ್ಚು ಬೇಕಾಗಿದೆ. ಇದರ ಬಗ್ಗೆ ಕಾನೂನು ಸೇವಾ ಪ್ರಾಧಿಕಾರದವರು ಪರಿಶೀಲನೆ ನಡೆಸಿದಾಗ ಇಂತಹ ಕೆಲವು ಆತಂಕಕಾರಿ ಅಂಶಗಳು ಬಯಲಾಗಿದೆ. ಇದರ ಬಗ್ಗೆ ಕಠಿಣ ಕ್ರಮ ತೆಗೆದುಕೊಳ್ಳಬೇಕಾಗಿರುವ ಕುರಿತು.**

**ಉತ್ತರ:-** ರಾಜ್ಯದಲ್ಲಿ ಭಿಕ್ಷಾಟನೆ ಮಾಡುವುದು ನಿಷೇಧಿಸಲಾಗಿದ್ದು, ಭಿಕ್ಷಾಟನೆ ಕಾಯ್ದೆ ಉಲ್ಲಂಘಿಸಿದವರ ಮೇಲೆ ಕಾನೂನು ರೀತ್ಯಾ ಪ್ರಕರಣಗಳನ್ನು ದಾಖಲಿಸಿ ನಿಯಾಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ. ಮುಂದುವರೆದಂತೆ, ಭಿಕ್ಷಾಟನೆಯಿಂದ ವೇಶ್ಯಾವಾಟಿಕೆಗೆ ಅಥವಾ ಅಕ್ರಮವಾಗಿ ಮಾನವ ಕಳ್ಳಸಾಗಣೆ ಮೂಲಕ ಅಪ್ರಾಪ್ತರು, ಯುವತಿಯರನ್ನು ವೇಶ್ಯಾವಾಟಿಕೆ ಜಾಲಕ್ಕೆ ದೂಡಿದರೆ ಅಂತಹ ಅಪರಾಧಿಗಳ ವಿರುದ್ಧ ಕಲಂ 370, 370ಎ ಐಪಿಸಿ/143, 144 ಬಿಎನ್.ಎಸ್ ಹಾಗೂ ಐಟಿಪಿ ಕಾಯ್ದೆ ಮತ್ತು ಇತರೆ ಸಂಬಂಧಿತ ಕಾಯ್ದೆ ಕಾನೂನುಗಳಡಿಯಲ್ಲಿ ಪ್ರಕರಣಗಳನ್ನು ದಾಖಲಿಸಲಾಗುತ್ತದೆ.

ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಭಿಕ್ಷಾಟನೆಗೆ ಸಂಬಂಧಿಸಿದಂತೆ ಭಿಕ್ಷಾಟನೆ ನಿಷೇಧ ಕಾಯ್ದೆಯಡಿಯಲ್ಲಿ ದಾಖಲಿಸಿರುವ ಪ್ರಕರಣಗಳು, ಕಾಣೆಯಾದ ಮಕ್ಕಳು, ಮತ್ತು ಮಕ್ಕಳ ಕಳ್ಳ ಸಾಗಾಣಿಕೆಯ ಕುರಿತು ವರದಿಯಾಗಿರುವ ಪ್ರಕರಣಗಳ ಸಂಖ್ಯೆ ಈ ಕೆಳಕಂಡಂತಿದೆ:

**ಭಿಕ್ಷಾಟನೆ ನಿಷೇಧ ಕಾಯ್ದೆ ಅಡಿಯಲ್ಲಿ ದಾಖಲಿಸಿರುವ ಪ್ರಕರಣಗಳು:**

| **ವರ್ಷ** | **ವರದಿ** |
|---|---|
| **2023** | 128 |
| **2024** | 30 |
| **2025** | 63 |
| **2026 (ಮೇ 31)** | 0 |

**ಕಾಣೆಯಾದ ಮಕ್ಕಳ ಪ್ರಕರಣಗಳು:**

| ವರ್ಷ | ಗಂಡು ಮಕ್ಕಳು | | | ಹೆಣ್ಣು ಮಕ್ಕಳು | | |
|---|---|---|---|---|---|---|
| | ವರದಿ | ಪತ್ತೆ | ನಾಪತ್ತೆ | ವರದಿ | ಪತ್ತೆ | ನಾಪತ್ತೆ |
| **2023** | 908 | 878 | 30 | 2136 | 2096 | 40 |
| **2024** | 986 | 951 | 35 | 2427 | 2362 | 65 |
| **2025** | 1006 | 956 | 50 | 2560 | 2400 | 160 |
| **2026 (ಮೇ 31)** | 419 | 280 | 139 | 1213 | 656 | 557 |

**ಮಕ್ಕಳ ಕಳ್ಳಸಾಗಣೆಗೆ ಒಳಪಟ್ಟ ಮಕ್ಕಳ ಸಂಖ್ಯೆ:**

| ವರ್ಷ | ಗಂಡು ಮಕ್ಕಳು | ಹೆಣ್ಣು ಮಕ್ಕಳು |
|---|---|---|
| **2023** | 3 | 9 |
| **2024** | 3 | 23 |
| **2025** | 6 | 15 |
| **2026 (ಮೇ 31)** | 2 | 2 |

**ರಾಜ್ಯದಲ್ಲಿ ಮಕ್ಕಳ ಅಪಹರಣ/ನಾಪತ್ತೆ ಪ್ರಕರಣಗಳನ್ನು ತಡೆಗಟ್ಟಲು ಮತ್ತು ಮಕ್ಕಳ ರಕ್ಷಣೆ ಹಾಗೂ ಸುರಕ್ಷತೆಗಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ:-**

- ಪೊಲೀಸ್ ಪ್ರಧಾನ ಕಛೇರಿಯ SOP ಸಂಖ್ಯೆ: CRM-2/224/WP/2018 ದಿ:16/9/2020, ಸುತ್ತೋಲೆ ಸಂಖ್ಯೆ: CRM-2/11/WP/2025 ದಿ: 11/10/2025 ಮತ್ತು CRM-2/11/WP/2025 ದಿ: 22/01/2025ರ ಆದೇಶಗಳನ್ವಯ ಅಪಹರಣ ಮತ್ತು ಕಾಣೆ ಪ್ರಕರಣಗಳಲ್ಲಿ ಸೂಕ್ತ ತನಿಖೆ ನಿರ್ವಹಿಸಲು ಎಲ್ಲಾ ಘಟಕಾಧಿಕಾರಿಗಳಿಗೆ ಸೂಕ್ತ ನಿರ್ದೇಶನ/ ಸೂಚನೆಗಳನ್ನು ನೀಡಲಾಗಿರುತ್ತದೆ.

- ಮಕ್ಕಳ ನಾಪತ್ತೆ ಪ್ರಕರಣಗಳಲ್ಲಿ ಪೊಲೀಸರು ನಿರ್ಲಕ್ಷ್ಯ ವಹಿಸುತ್ತಿರುವುದು ಹಾಗೂ ತನಿಖೆಯನ್ನೇ ನಡೆಸದೆ ಕೇಸ್‌ಗಳನ್ನು ಮುಕ್ತಾಯಗೊಳಿಸುವುದಿಲ್ಲ. ಮಕ್ಕಳ ನಾಪತ್ತೆ ಪ್ರಕರಣಗಳಲ್ಲಿ ಕಾನೂನುಬದ್ಧವಾಗಿ ಅಗತ್ಯ ತನಿಖಾ ಕ್ರಮಗಳನ್ನು ಅನುಸರಿಸಲಾಗುತ್ತದೆ ಹಾಗೂ ಪತ್ತೆ ಕ್ರಮವನ್ನು ಮುಂದುವರೆಸಲಾಗುತ್ತದೆ.

- ಮಕ್ಕಳ ನಾಪತ್ತೆ ಪ್ರಕರಣಗಳಲ್ಲಿ ಮಾಹಿತಿ ದೊರೆತ ಕೂಡಲೇ FIR ದಾಖಲಿಸಲಾಗುತ್ತದೆ. ಕಾನೂನುಬದ್ಧ ಕ್ರಮಗಳನ್ನು ಅನುಸರಿಸಿ ತನಿಖೆಯನ್ನು ನಡೆಸಲಾಗುತ್ತದೆ. ಯಾವುದೇ ಪ್ರಕರಣದಲ್ಲಿ ಪೊಲೀಸ್ ಅಧಿಕಾರಿ/ ಸಿಬ್ಬಂದಿಯವರ ತನಿಖಾ ವೈಫಲ್ಯ, ನಿರ್ಲಕ್ಷತೆ ಕಂಡುಬಂದಲ್ಲಿ ಅಂತಹವರ ವಿರುದ್ಧ ನಿಯಮಾನುಸಾರ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲಾಗುತ್ತದೆ.

- ಮಕ್ಕಳು ಕಾಣೆಯಾದ ಸಂದರ್ಭದಲ್ಲಿ ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಪೀಠದ ಆದೇಶದಂತೆ ನಾಪತ್ತೆ ಪ್ರಕರಣಗಳನ್ನು ದಾಖಲಿಸಿದ ನಂತರ ತನಿಖಾಧಿಕಾರಿಗಳು ಪತ್ತೆ

ಹಚ್ಚಲು ಕೈಗೊಳ್ಳಬೇಕಾದ/ ಅನುಸರಿಸಬೇಕಾದ ಕ್ರಮಗಳ ಕುರಿತು ಪೊಲೀಸ್ ಪ್ರಧಾನ ಕಛೇರಿ ಸ್ಥಾಯಿ ಆದೇಶ ಸಂಖ್ಯೆ :1054, ದಿನಾಂಕ: 21.01.2026 ರಂದು ನಿರ್ದೇಶನ ನೀಡಲಾಗಿದೆ.

- ಪ್ರತಿ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳು ಘಟಕವಾರು ಹಿರಿಯ ಮಕ್ಕಳ ಕಲ್ಯಾಣ ಅಧಿಕಾರಿಗಳು ನಾಪತ್ತೆ ಪ್ರಕರಣಗಳನ್ನು ಕಾಲಕಾಲಕ್ಕೆ ಪರಿಶೀಲಿಸಿ ಸಭೆ ಹಮ್ಮಿಕೊಂಡು ಸಿಬ್ಬಂದಿಗಳಿಗೆ ತರಬೇತಿ ಮತ್ತು ತನಿಖಾ ಹಂತಗಳನ್ನು ಪರಿಶೀಲಿಸಿ ಸೂಕ್ತ ನಿರ್ದೇಶನಗಳನ್ನು ನೀಡುತ್ತಿರುತ್ತಾರೆ.

- ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಕಾರ್ಮಿಕ ಇಲಾಖೆ ಮತ್ತು ಶಿಕ್ಷಣ ಇಲಾಖೆ ಸಹಭಾಗಿತ್ವದಲ್ಲಿ ಮಕ್ಕಳ ಶೋಷಣೆ ಮತ್ತು ದೌರ್ಜನ್ಯಗಳ ಕುರಿತು ಅಗತ್ಯ ಸಭೆಗಳನ್ನು ನಡೆಸಿ ಈ ಬಗ್ಗೆ ಕಾಣೆಯಾದ /ನಾಪತ್ತೆಯಾದ ಪ್ರಕರಣಗಳ ಕುರಿತು ಜಾಗೃತಿಯನ್ನು ಮೂಡಿಸಲಾಗುತ್ತಿದೆ.

- ದಿನಾಂಕ:10/10/2025 ರಂದು ರಾಜ್ಯ ಮಟ್ಟದ ಪೊಲೀಸ್ ಅಧಿಕಾರಿ ಮತ್ತು ಇತರೆ ಇಲಾಖೆಗಳ ಸಹಭಾಗಿತ್ವದಲ್ಲಿ ಮಾನವ ಕಳ್ಳ ಸಾಗಾಣಿಕೆ ತಡೆ ಕುರಿತು ರಾಜ್ಯ ಮಟ್ಟದ ಕಾರ್ಯಾಗಾರವನ್ನು ಆಯೋಜಿಸಿ ವಿಚಾರ ವಿನಿಮಯ ಮಾಡಿಕೊಂಡಿರುತ್ತದೆ.

- ಠಾಣಾ ಹಂತದಲ್ಲಿ ಪ್ರತಿ ಗುರುವಾರ **ತೆರೆದ ಮನೆ** ಕಾರ್ಯಕ್ರಮ ನಡೆಸುವ ಮೂಲಕ ಮಕ್ಕಳಲ್ಲಿ ಕಾನೂನು ಅರಿವನ್ನು ಮೂಡಿಸಿಕೊಂಡು ಬರಲಾಗುತ್ತಿದೆ. ಮಕ್ಕಳನ್ನು ಠಾಣೆಗೆ ಕರೆಯಿಸಿ ಮಕ್ಕಳ ಮತ್ತು ಮಹಿಳಾ ಕಾನೂನುಗಳ ಬಗ್ಗೆ, ಸೂಕ್ತ ಜಾಗೃತಿ ಕಾರ್ಯಕ್ರಮ ಮಾಡಲಾಗುತ್ತಿದೆ. ಮಕ್ಕಳ ಸಹಾಯವಾಣಿ ಸಂಖ್ಯೆ 1098 ರ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ.

- ಎಸ್.ಜೆ.ಪಿ.ಯು ಘಟಕವನ್ನು ನಿರ್ವಹಿಸಲಾಗುತ್ತಿದೆ. ಮಕ್ಕಳ ನಾಪತ್ತೆ ಪ್ರಕರಣಗಳಲ್ಲಿ ಕಾಣೆಯಾದ ಮಕ್ಕಳನ್ನು ದುರ್ಬಳಕೆ ಮಾಡಿಕೊಂಡಿರುವವರ ವಿರುದ್ಧ ಪೋಕ್ಸೋ ಕಾಯ್ದೆ, ಜೆಜೆ ಆಕ್ಟ್ ಮಕ್ಕಳ ಕಾಯ್ದೆಯಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿ ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಜರುಗಿಸಿಕೊಂಡು ಬರಲಾಗುತ್ತಿದೆ.

- ಮನೆ ಮನೆಗೆ ಪೊಲೀಸ್ ಕಾರ್ಯಕ್ರಮದ ಸಮಯದಲ್ಲಿ ಸಾರ್ವಜನಿಕರ ಮನೆಗೆ ಭೇಟಿ ನೀಡಿದಾಗ ತಮ್ಮ ಮಕ್ಕಳ ಶಿಕ್ಷಣ ಮತ್ತು ಪೋಷಣೆಯ ಬಗ್ಗೆ ತಿಳಿಸುವುದು.

- ಮಕ್ಕಳ ಅಪಹರಣ ಮತ್ತು ಕಾಣೆ ಪ್ರಕರಣಗಳ ತನಿಖೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯದ ಆದೇಶಗಳಂತೆ ತನಿಖೆಯನ್ನು ನಿರ್ವಹಿಸಲಾಗುತ್ತಿದೆ.

- ಕಾಣೆಯಾದ ಮಕ್ಕಳ ಮಾಹಿತಿ ಮತ್ತು ಪತ್ತೆಯಾದ ಮಕ್ಕಳ ಮಾಹಿತಿಯನ್ನು **Mission Vathsalya Portal** ಗಳಿಗೆ ಸಲ್ಲಿಸಿಕೊಂಡು ಅಗತ್ಯ ಕ್ರಮ ಜರುಗಿಸಲಾಗುತ್ತಿದೆ.

- ರಾಜ್ಯದ ಎಲ್ಲಾ ಜಿಲ್ಲೆ ಮತ್ತು ನಗರಗಳಲ್ಲಿ (ಬೆಂಗಳೂರು ನಗರ ಹೊರತು ಪಡಿಸಿ) ಮಹಿಳೆ ಮತ್ತು ಮಕ್ಕಳ ಸುರಕ್ಷತೆಗಾಗಿ **ಅಕ್ಕ ಪಡೆಯನ್ನು** ರಚಿಸಲಾಗಿದೆ.

- ರಾಜ್ಯದಲ್ಲಿ **"ಮನೆ-ಮನೆಗೆ ಪೊಲೀಸ್"** ಎಂಬ ನೂತನ ಪರಿಕಲ್ಪನೆಯನ್ನು ಜಾರಿಗೊಳಿಸುವ ಮೂಲಕ ಪ್ರತಿ ಮನೆ-ಮನೆಗೆ ಪೊಲೀಸ್ ಭೇಟಿ ನೀಡುವ ಮೂಲಕ ಸಮುದಾಯ ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸಲಾಗಿದೆ .

- ಏಕಾಂಗಿಯಾಗಿ ವಾಸಿಸುವ ಹಿರಿಯ ನಾಗರಿಕರಿಗೆ ಸುರಕ್ಷೆ ಮತ್ತು ವಿಶ್ವಾಸ ನೀಡುವ ಆಶಾಕಿರಣವಾಗಿ **"ಆಸರೆ"** ಎಂಬ ಸಮುದಾಯ ಪೊಲೀಸ್ ಪರಿಕಲ್ಪನೆಯನ್ನು ಅನುಷ್ಠಾನಗೊಳಿಸಲಾಗಿದೆ.
- ಸಂತ್ರಸ್ತರ ದೂರು/ಅಹವಾಲುಗಳು, ಹೇಳಿಕೆಗಳು, ಜೀವಬೆದರಿಕೆ ಇದ್ದರೆ ಅಗತ್ಯ ರಕ್ಷಣೆಗಾಗಿ ಹಾಗೂ ಪರಿಶೀಲನೆಗಾಗಿ ಮುಂತಾದ ಇತರೆ ಸಮಸ್ಯೆಗಳನ್ನು ಆಲಿಸಲು **ಪ್ರತಿ ತಿಂಗಳ 3ನೇ ಭಾನುವಾರವನ್ನು ಸಂತ್ರಸ್ತರ/ದೂರುದಾರರ (Victim Day)** ನೊಂದವರ ದಿನವೆಂಬ ಕಾರ್ಯಕ್ರಮವನ್ನು ಠಾಣಾವ್ಯಾಪ್ತಿಯಲ್ಲಿ ಆಯೋಜಿಸಲಾಗುತ್ತಿದೆ.

**ಸಂಖ್ಯೆ: ಹೆಚ್‌ಡಿ 34 ಪಿಸಿಕ್ಯೂ 2026**

([illegible])
ಗೃಹ ಸಚಿವರು

158 [illegible]